## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.99–2014**          **ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು | ದೇವಣ್ಣ |
| ವಾಸ್ತವ್ಯ | ಮಲ್ಲುಂಡಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 13–06–2024.** |

**ಪಾಟೀ ಸವಾಲುಃ ವಾದಿಗಳ ಪರ  ಶ್ರೀ ಸಿ.ಎಲ್.ಬಿ   ವಕೀಲರಿಂದಃ**

ಈ ದಾವಾವನ್ನು ಸರ್ವೆ ನಂ.2/ಎ 1 ರ ವಿಸ್ತೀರ್ಣ 1 ಎಕರೆ 18 ಗುಂಟೆ ಬಾಬ್ತು ಸಲ್ಲಿಸಲಾಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿ ಹೇಳಬಲ್ಲೆ ಪೂರ್ವಕ್ಕೆಃ– ಕುಳ್ಳಪ್ಪನವರ ಜಮೀನು, ಪಶ್ಚಿಮಕ್ಕೆಃ–ವಾದಿಗಳ ಸೋದರ ಅತ್ತೆಯವರಾದ ಮಹದೇವಮ್ಮ ರವರು ಜಮೀನು, ಉತ್ತರಕ್ಕೆಃ–ವೀರಭದ್ರಪ್ಪನವರ ಜಮೀನು ಮತ್ತು ದಕ್ಷಿಣಕ್ಕೆಃ–ಬೀರುವಾಳು ನಾಲೆ ಇರುತ್ತದೆ.

2. ಸರ್ವೆ ನಂ.2 ಯಾವಾಗ ಪೋಡು ಆಯಿತು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.2 ಪೋಡು ಆದ ಬಗ್ಗೆ ನಾನು ಕಂದಾಯ ಇಲಾಖೆಯ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ.  ಸರ್ವೆ ನಂ.2 ಎಷ್ಟು ಪೋಡುಗಳು ಆಗಿವೆ ಎಂದು ನನಗೆ ಗೊತ್ತಿಲ್ಲ.  ಸರ್ವೆ ನಂ.2 ರ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ವಾದಿಗಳ ಸೋದರ ಅತ್ತೆಯಾದ ಮಹದೇವಮ್ಮ ನವರು ನನ್ನ ವಿರುದ್ಧ ನಂಜನಗೂಡಿನ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಓಸ್.ಎಸ್.56/2014 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಮಹದೇವಮ್ಮ ನವರು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಮಹದೇವಮ್ಮನವರು ಸದರಿ ದಾವೆಯನ್ನು

ಎಷ್ಟು, ಎಷ್ಟು ಗುಂಟೆಗೆ ಹಾಕಿದ್ದಾರೆ ಎಂದು ಗೊತ್ತಿಲ್ಲ. ನಾನು ಸದರಿ ದಾವೆಯಲ್ಲಿ ವಕೀಲರನ್ನು ನೇಮಿಸಿಕೊಂಡು ನನ್ನ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಮಹದೇವಮ್ಮ ನವರು ಸಲ್ಲಿರುವ ದಾವೆಯ ಸಂಪೂರ್ಣ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನಾನು ಓಸ್.ಎಸ್.56/2014 ರ ದಾವೆಯಲ್ಲಿ ಸಲ್ಲಿಸಿದ ತಕರಾರನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆಯೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂಬುದರ ಬಗ್ಗೆ ನನಗೆ ತಿಳುವಳಿಕೆ ಇರುತ್ತದೆ. ಮಹದೇವಮ್ಮ ನವರು ಸರ್ವೇ ನಂ.2 ಕ್ಕೆ ಸಂಬಂಧಪಟ್ಟ ವಿಸ್ತೀರ್ಣ 1 ಎಕರೆ 20 ಗುಂಟೆ ಬಾಬ್ತು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ಎಕರೆ 18 ಗುಂಟೆ ಬಾಬ್ತು ದಾವೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಮಹದೇವಮ್ಮ ನವರು ಸಲ್ಲಿಸಿರುವ ದಾವೆಯ ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೇ ನಂ.2/2 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ಮತ್ತು ಮಹದೇವಮ್ಮನವರು ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ಪ್ರತ್ಯೇಕ ಪ್ರತ್ಯೇಕವಾಗಿ ತಲಾ ಒಂದೊಂದು ಅರ್ಜಿಯನ್ನು ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ದಾವೆಯಲ್ಲಿ ನಾವಿಬ್ಬರೂ ಸಲ್ಲಿಸಿದ್ದ ಮಧ್ಯಂತರ ಅರ್ಜಿಗಳನ್ನು ನ್ಯಾಯಾಲಯವು ವಜಾಕರಿಸಿರುತ್ತದೆ ಎಂದರೆ ಸರಿ. ಮಧ್ಯಂತರ ಅರ್ಜಿಯ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಮಹದೇವಮ್ಮನವರ ನನ್ನ ವಿರುದ್ಧ ಸಲ್ಲಿಸಿದ್ದ ಓಸ್.ಎಸ್.56/2014 ರ ದಾವೆಯೂ ಇತ್ಯರ್ಥಗೊಂಡು ಸುಮಾರು 2 ವರ್ಷಗಳಾಗಿರುತ್ತವೆ. ಮಹದೇವಮ್ಮನವರು ಸಲ್ಲಿಸಿದ್ದ ದಾವೆಯೂ ಇತ್ಯರ್ಥಗೊಂಡಿರುತ್ತದೆ ಎಂಬುದನ್ನು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಮಹದೇವಮ್ಮನವರ ನನ್ನ ವಿರುದ್ಧ ಸಲ್ಲಿಸಿದ್ದ ಓಸ್.ಎಸ್.56/2014 ರ ದಾವೆಯೂ ಇನ್ನೂ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಹದೇವಮ್ಮನವರು ನ್ಯಾಯಾಲಯಕ್ಕೆ ಬರುವುದನ್ನು ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಮಹದೇವಮ್ಮನವರು ನನ್ನ ವಿರುದ್ಧ ಓಸ್.ಎಸ್.56/2014 ರಲ್ಲಿ ಚೆಕ್ಕುಬಂದಿಗೆ ಸಂಬಂಧಪಟ್ಟಂತೆ ನಮ್ಮಗಳ ನಡುವೆ ವಿವಾದ ಇದ್ದುದ್ದರಿಂದ ಅದನ್ನು ಬಗೆಹರಿಸಲು ನ್ಯಾಯಾಲಯದ ನಿಯೋಗಿ ರವರನ್ನು ನೇಮಕ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3. ಸರ್ವೇ ನಂ.2 ಒಟ್ಟು ವಿಸ್ತೀರ್ಣ 7 ಎಕರೆ 20 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.2 ರ ವಿಸ್ತೀರ್ಣ 7 ಎಕರೆ 20 ಗುಂಟೆ ಸ್ವತ್ತು ವಾದಿಗಳ ತಾತನವರಾದ ಕಾಳಿಂಗಯ್ಯ ಉರುಫ್ ಕಾಳಿಂಗಪ್ಪನವರಿಗೆ ದಿ.30-06-1937 ರಂದು ಸರ್ಕಾರದಿಂದ ಮಂಜೂರು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಮಂಜೂರು ಆದ ಬಗ್ಗೆ ಕಾಳಿಂಗಯ್ಯ ಉರುಫ್ ಕಾಳಿಂಗಪ್ಪನವರಿಗೆ ಮಂಜೂರಾತಿ ಪ್ರಮಾಣ ಪತ್ರವನ್ನು ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ ಆ ರೀತಿ ಮಂಜೂರಾದ ದಿನದಿಂದ ಅವರ ಜೀವಿತಾವಧಿಯವರೆವಿಗೂ ಕಾಳಿಂಗಯ್ಯ ಉರುಫ್ ಕಾಳಿಂಗಪ್ಪನವರು ತನಗೆ ಮಂಜೂರಾದ ಸ್ವತ್ತಿನ ಸ್ವಾಧೀನಾನುಭದಲ್ಲಿ ಇದ್ದರು ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**